**ದಿನಾಂಕಃ 22-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** 1 ರಿಂದ 5 ನೇ ಪ್ರತಿವಾದಿಗಳ ಪರವಾಗಿ ಶ್ರೀ ಆರ್.ವಿ., ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಓದಲು ಬರುವುದಿಲ್ಲ ಆದರೆ ಸಹಿ ಮಾಡಲು ಬರುತ್ತದೆ. ನಾನು ಪ್ರಸ್ತುತ ಮಡಕಶಿರಾದಲ್ಲಿ ವಾಸವಾಗಿದ್ದೇನೆ. ನಾನು 1980 ನೇ ಸಾಲಿನಿಂದ ಇಲ್ಲಿಯವರೆಗೂ ಮಡಕಶಿರಾದಲ್ಲಿ ವಾಸವಾಗಿದ್ದೇನೆ. ದಾವಾ ಸ್ವತ್ತು ನನ್ನದು ಎಂದು ಹೇಳಿ ನಾನು ಪ್ರತಿವಾದಿಗಳ ವಿರುದ್ಧ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆಃ ನಂಜಮ್ಮ ರವರ ಜಮೀನು, ಪಶ್ಚಿಮಕ್ಕೆಃ ಪರಶುರಾಮಪ್ಪ ರವರ ಜಮೀನು, ಉತ್ತರಕ್ಕೆಃ ಸಂಜೀವಮ್ಮ ರವರ ಜಮೀನು ಹಾಗೂ ದಕ್ಷಿಣಕ್ಕೆಃ ಪಾವಗಡದಿಂದ ಪೆನುಗೊಂಡಕ್ಕೆ ಹೋಗುವ ರಸ್ತೆ ಇದೆ. ದಾವಾ ಸ್ವತ್ತು ನನ್ನದು ಎಂದು ತೋರಿಸಲು ನಾನು ನೋಂದಾಯಿತ ವಿಲ್ ನಾಮಾವನ್ನು ಹಾಜರುಪಡಿಸಿರುತ್ತೇನೆ. ಸದರಿ ವಿಲ್ 1972 ರಲ್ಲಿ ಆಗಿರುತ್ತದೆ. ವಿಲ್ ಆಧಾರದ ಮೇಲೆ ದಾವಾ ಸ್ವತ್ತಿನ ಖಾತೆ ಹಾಗೂ ಪಹಣಿ ನನ್ನ ಹೆಸರಿಗೆ ಆಗಿರುತ್ತದೆ. ನನ್ನ ಹೆಸರಿಗೆ ಇರುವ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. 1972 ರಿಂದ ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಬರುತ್ತಿದೆ. 1990 ರಿಂದಲೂ ಸಹಾ ಇಲ್ಲಿಯವರೆಗೂ ದಾವಾ ಸ್ವತ್ತಿನಲ್ಲಿ ನನ್ನ ಹೆಸರಿನಲ್ಲಿ ಬರುತ್ತದೆ. ನಾನು ನನ್ನ ಹೆಸರಿನಲ್ಲಿ ಆಗಿರುವ ಎಲ್ಲಾ ದಾಖಲಾತಿಗಳನ್ನು ಸಹಾ ನೋಡಿರುತ್ತೇನೆ. 1990 ರಿಂದ ಇಲ್ಲಿಯವರೆಗಿನ ನನ್ನ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ಸಹಾ ನಾನು ಹಾಜರುಪಡಿಸಿರುತ್ತೇನೆ. ದಿನಾಂಕಃ 16.06.1990 ರಂದು ನಾನು ದಾವಾ ಸ್ವತ್ತನ್ನು 1 ರಿಂದ 5 ನೇ ಪ್ರತಿವಾದಿಗಳ ತಾಯಿಯಾದ ಸಂಜೀವಮ್ಮ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 1990 ರಲ್ಲಿ ಸದರಿ ಸಂಜೀವಮ್ಮ ರವರಿಗೆ ದಾವಾ ಸ್ವತ್ತನ್ನು ಮಾರಾಟ

ಮಾಡಿದ ನಂತರ ದಾವಾ ಸ್ವತ್ತು ಸಂಜೀವಮ್ಮ ರವರ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಕರ್ತವ್ಯದಲ್ಲಿ ಇದ್ದ ಸಮಯದಲ್ಲಿ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ 1 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಮುಂದುವರಿದ ಪಾಟೀ ಸವಾಲಿಗೆ ಅನುಮತಿ ನೀಡಿ ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ**

**ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ**
ಪಾವಗಡ